2016 ಕ.ತೀ.ವ 1729

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

ಪಾರ್ವತಿ ಬಾಯಿ –ವಿರುದ್ಧ– ಕರ್ನಾಟಕ ಸರ್ಕಾರ ಹಾಗೂ ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 115ರಡಿಯಲ್ಲಿ ಸಿವಿಲ್ ಪರಿಷ್ಕರಣಾ ಅರ್ಜಿ.

ಅರ್ಜಿದಾರರು ಎದುರುದಾರರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯಲ್ಲಿ ಕಾಲ ಪರಿಮಿತಿ ಕಾಯಿದೆ ಕಲಂ 5 ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 3 ರಡಿಯಲ್ಲಿ ಸಲ್ಲಿಸಿದ ಎರಡು ಪ್ರತ್ಯೇಕ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ಪರಿಷ್ಕರಣಾ ಅರ್ಜಿ.

*ಜಲಾಧಿ ಸುಗುಣ –ವಿರುದ್ಧ– ಸತ್ಯ ಸಾಯಿ ಕೇಂದ್ರೀಯ ಟ್ರಸ್ಟ್ ಹಾಗೂ ಮತ್ತಿತರರು–* (2008)8 ಎಸ್‌ಸಿಸಿ 521ರ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಆಧರಿಸಿದ ಉಚ್ಚ ನ್ಯಾಯಾಲಯವು ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಬದಿಗಿರಿಸಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 22 ನಿಯಮ 5 ರಂತೆ ನಡವಳಗಳನ್ನು ನಡೆಸುವಂತೆ ಪ್ರಕರಣವನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂತಿರುಗಿಸಿ ಸದರಿ ಪರಿಷ್ಕರಣಾ ಅರ್ಜಿಯನ್ನು ಪುರಸ್ಕರಿಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

*1. (2009) 5 ಎಸ್‌ಸಿಸಿ 155*
*ಕಾಂತೀಯ ಸಿಂಗ್ ಸ್ಯಾಟೋಕ್ ಸಿಂಗ್ ಮತ್ತು ಇತರರು*
*–ವಿರುದ್ಧ– ಕರ್ತರ್ ಸಿಂಗ್* *(ಉಲ್ಲೇ) 12*

*ಸಿವಿಲ್ ಪುನರೀಕ್ಷಣಾ ಅರ್ಜಿ ಸಂಖ್ಯೆ: 200015/2015, ದಿನಾಂಕ: 26ನೇ ಜುಲೈ, 2016.

2. *(2008) 8 ಎಸ್‌ಸಿಸಿ 521*
*ಜಲಾಧಿ ಸುಗುಣ (ಮೃತನ ಕಾನೂನು ಸಮ್ಮತ ಪ್ರತಿನಿಧಿ)*
*–ವಿರುದ್ಧ– ಸತ್ಯ ಸಾಯಿ ಕೇಂದ್ರೀಯ ಟ್ರಸ್ಟ್*
*ಮತ್ತು ಇತರರು (ಉಲ್ಲೇ) 13*
3. *(2010)2 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಗಳು 162*
*ಸುರೇಶ್ ಕುಮಾರ್ ಬನ್ಸಾಲ್*
*–ವಿರುದ್ಧ– ಕೃಷ್ಣ ಬನ್ಸಾಲ್ ಮತ್ತು ಇನ್ನೊಬ್ಬರು (ಉಲ್ಲೇ) 14*

ಅರ್ಜಿದಾರರ ಪರ: ಶ್ರೀ ಅಶೋಕ್ ಎಸ್ ಕಿಣಗಿ, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಎ ಸೈಯದ್ ಹಬೀಬ್, ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ವಾದಿಗಳಿಂದ ಆಳಂದದಲ್ಲಿ ಸಿವಿಲ್ ನ್ಯಾಯಾಧೀಶರ ಮುಂದೆ ಸಲ್ಲಿಸಲಾಗಿದ್ದ ಮೂಲ ದಾವೆ ಸಂಖ್ಯೆ 71/2012ರಲ್ಲಿ ಐ.ಎ.ಸಂಖ್ಯೆ V ಮತ್ತು VIರ ಮೇಲೆ ದಿನಾಂಕ 15.04.2015ರಂದು ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ವಜಾ ಮಾಡಿದ ಆದೇಶದ ವಿರುದ್ಧ ವಾದಿಗಳು ಈ ಪುನರ್ ಪರಿಷ್ಕರಣಾ ಅರ್ಜಿಯನ್ನು ದಾಖಲಿಸಿದ್ದಾರೆ.

2. ವಾದಿಯು, ಕಲ್ಬುರ್ಗಿ ಜಿಲ್ಲೆಯ ಆಳಂದದ ಸರ್ವೇ ನಂ.219/1ರಲ್ಲಿ ಇರುವ 28 ಎಕರೆ 34 ಗುಂಟೆಗಳ ದಾವಾ ಅನುಸೂಚಿತ ಸ್ವತ್ತಿನ ಸ್ವಾಧೀನದ ಸಂಬಂಧದಲ್ಲಿ ಉದ್ಘೋಷಿಸುವುದಕ್ಕೆ ಸಂಬಂಧಪಟ್ಟಂತೆ ಮತ್ತು ವಾದಪತ್ರದ ಅನುಸೂಚಿ 'ಎ'ಯಲ್ಲಿ ನಮೂದಿಸಿರುವ ದಾವ ಸ್ವತ್ತಿನ ಮುಖ್ಯ ಭಾಗದ ನಕ್ಷೆಯನ್ನು ವಾದಿಯು ಕೆಂಪು ಬಣ್ಣದಲ್ಲಿ ಎಬಿಸಿಡಿ ಎಂದು ತೋರಿಸಿರುವ ಭಾಗದಲ್ಲಿ ಯಾವುದೇ

ಹೊಸ ನಿರ್ಮಾಣ ರಚನೆಗಳಿಗೆ ಖಾಯಂ ನಿರ್ಬಂಧಕಾಜ್ಞೆಗೆ ಸಂಬಂಧಪಟ್ಟಂತೆ ಪ್ರತಿವಾದಿಗಳು / ಪ್ರತ್ಯರ್ಜಿದಾರರ ವಿರುದ್ಧ ಮೂಲ ದಾವೆ ಸಂಖ್ಯೆ 71/2012 ಯನ್ನು ದಾಖಲಿಸಿದ್ದಾರೆ. ವಾದಿಯ ವಾದಪತ್ರದಲ್ಲಿನ ದೃಢೋಕ್ತಿಗಳನ್ನು ನಿರಾಕರಿಸಿರುವ ಪ್ರತ್ಯರ್ಜಿದಾರರು ಲಿಖಿತ ವಿವರಣೆಯನ್ನು ದಾಖಲಿಸಿದ್ದಾರೆ.

3. ಮೂಲ ವ್ಯವಹರಣೆಗಳು ಇತ್ಯರ್ಥದಲ್ಲಿರುವಾಗಲೇ ಏಕೈಕ ವಾದಿಯು ನಿಧನವಾಗಿರುತ್ತಾರೆ. ಆದುದರಿಂದ, ಅರ್ಜಿದಾರರು ದಿನಾಂಕ 5.8.2002ರಂದು ನೋಂದಾಯಿತ ಉಯಿಲಿನ ಆಧಾರದ ಮೇಲೆ ಕಾನೂನು ಸಮ್ಮತ ಪ್ರತಿನಿಧಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಅರ್ಜಿಯನ್ನು ಸಲ್ಲಿಸಲು ಆಗಿರುವ ವಿಳಂಬವನ್ನು ಕಾಲಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಕಾಲ ವಿಳಂಬವನ್ನು ಮನ್ನಾ ಮಾಡಲು ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಅರ್ಜಿಗಳನ್ನು ಪ್ರತಿರೋಧಿಸಲು ಅರ್ಜಿದಾರರು/ಪ್ರತ್ಯರ್ಜಿದಾರರು ಪ್ರತ್ಯೇಕವಾಗಿ ಆಕ್ಷೇಪಣೆಗಳನ್ನು ದಾಖಲಿಸಿದ್ದಾರೆ.

4. ಇಬ್ಬರೂ ಪಕ್ಷಕಾರರ ಅಹವಾಲನ್ನು ಆಲಿಸಿದ ತರುವಾಯ ಮಾನ್ಯ ಹಿರಿಯ ನ್ಯಾಯಾಧೀಶರು, ಉಯಿಲನ್ನು ರುಜುವಾತುಪಡಿಸಬೇಕಾದ ಮುಖ್ಯವಾದ ಆಧಾರದ ಮೇಲೆ ಮತ್ತು ಸಕ್ಷಮ ಪ್ರಾಧಿಕಾರದಿಂದ ಪ್ರತಿಬಂಧಿತ ಪತ್ರವನ್ನು ತರಬೇಕಾದ ಕಾರಣದ ಮೇಲೆ ಮತ್ತು ಅರ್ಜಿಯನ್ನು ಸಲ್ಲಿಸಿದ ಮಾತ್ರಕ್ಕೆ ಆಕೆ ವ್ಯಾಜ್ಯದ ಅಡಿಯಲ್ಲಿರುವ ಸ್ವತ್ತಿಗೆ ಕಾನೂನು ಸಮ್ಮತ ವಾರಸುದಾರಳಲ್ಲ ಎಂಬ ಕಾರಣದ ಮೇಲೆ ದಿನಾಂಕ 15.04.2015ರ ಪ್ರಶ್ನಿತ ಆದೇಶದ ಮೂಲಕ ಅರ್ಜಿಗಳನ್ನು ವಜಾಗೊಳಿಸಿರುತ್ತಾರೆ. ಹಾಗಾಗಿ, ಪ್ರಸ್ತುತ ಸಿವಿಲ್ ಪುನರ್ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

5. ನಾನು ದಾವೆಯ ಸಂಬಂಧದಲ್ಲಿ ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿರುತ್ತೇನೆ.

6. ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಉಪಬಂಧಗಳಿಗೆ ಪ್ರತಿಕೂಲವಾಗಿ ಅಧಿವಿಚಾರಣಾ ನ್ಯಾಯಾಲಯವು ಪ್ರಶ್ನಿತ ಆದೇಶವನ್ನು ಹೊರಡಿಸಿದೆಯೆಂದು ಅರ್ಜಿದಾರರ ಪರ ವಕೀಲರಾದ ಮಾನ್ಯ ಶ್ರೀ ಅಶೋಕ್ ಎಸ್. ಕಿಣಗಿ ಯವರು ವಾದಿಸಿರುತ್ತಾರೆ. ಅರ್ಜಿದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಅರ್ಜಿಯನ್ನು ಸಲ್ಲಿಸುವಾಗ ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ನೋಂದಾಯಿತ ಉಯಿಲಿನ ಆಧಾರದ ಮೇಲೆ ಸಲ್ಲಿಸಿದ ಅರ್ಜಿಯನ್ನು ಸಲ್ಲಿಸಲು ಆದ ವಿಳಂಬವನ್ನು ಮನ್ನಾ ಮಾಡುವಂತೆ ಕೋರಿರುತ್ತಾರೆ, ಮತ್ತು ಇದನ್ನು ಪ್ರತಿವಾದಿಗಳು/ಪ್ರತ್ಯರ್ಜಿದಾರರು ವಿವಾದವಾಗಿಸಿರುವುದರಿಂದ, ಅದನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಅಡಿಯಲ್ಲಿ ಉದ್ದೇಶಿಸಿರುವಂತಹ ವಿಚಾರಣೆಯನ್ನು ನಡೆಸುವುದು ವಿಚಾರಣಾ ನ್ಯಾಯಾಲಯದ ಕರ್ತವ್ಯವಾಗಿದೆ ಮತ್ತು ಇದನ್ನು ಮಾಡಿರುವುದಿಲ್ಲ. ಆದುದರಿಂದ, ಅಧಿವಿಚಾರಣಾ ನ್ಯಾಯಾಲಯದ ಆಕ್ಷೇಪಿತ ತೀರ್ಪನ್ನು ಮತ್ತು ಡಿಕ್ರಿಯನ್ನು ತಳ್ಳಿಹಾಕುವಂತೆ ಕೋರಿರುತ್ತಾರೆ.

7. ಇದಕ್ಕೆ ವಿರುದ್ಧವಾಗಿ, ಶ್ರೀ ಸೈಯದ್ ಹಬೀಬ್, ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿ, ಇವರು ವಿಚಾರಣಾ ನ್ಯಾಯಾಲಯವು ಹೊರಡಿಸಿದ ಆಜ್ಞೆಯನ್ನು ಸಮರ್ಥಿಸುವುದಕ್ಕೆ ಕೋರಿರುತ್ತಾರೆ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಉದ್ದೇಶಿತವಾಗಿರುವಂತಹ ಯಾವುದೇ ವಿಚಾರಣೆಯನ್ನು ನಡೆಸದೆ ಅಧಿವಿಚಾರಣಾ ನ್ಯಾಯಾಲಯವು ಅರ್ಜಿಗಳನ್ನು ವಜಾ ಮಾಡುವುದಕ್ಕೆ ಕ್ರಮ ಜರುಗಿಸಿರುವ ವ್ಯಾಜ್ಯ ಸಂಗತಿಯನ್ನು ವಿವಾದಿಸಿರುವುದಿಲ್ಲ.

8. ನಾನು ಪಕ್ಷಕಾರರ ಮಾನ್ಯ ನ್ಯಾಯವಾದಿಗಳ ಮುಂದುವರೆದ ವಾದಗಳನ್ನು ನನ್ನ ತೀವ್ರತರ ಕಾತರತೆಯಿಂದ ಪರಿಗಣನೆಗೆ ತೆಗೆದುಕೊಂಡಿರುತ್ತೇನೆ ಹಾಗೂ ದಾಖಲೆಯ ಮೇಲಿನ ಇಡೀ ವಸ್ತು ವಿಷಯವನ್ನು ಅವಲೋಕಿಸಿರುತ್ತೇನೆ.

9. ಮೂಲ ವಾದಿಯು ದಾವೆಯ ಅನುಸೂಚಿತ ಸ್ವತ್ತಿನ ಸಂಬಂಧದಲ್ಲಿ ಖಾಯಂ ನಿರ್ಬಂಧಕಾಜ್ಞೆಯನ್ನು ಉದ್ಘೋಷಿಸುವುದಕ್ಕಾಗಿ ಮೂಲ ದಾವೆ

ಸಂಖ್ಯೆ 71/2012ಅನ್ನು ಸಲ್ಲಿಸಿರುವುದು ನಿರ್ವಿವಾದಿತ ಸಂಗತಿಯಾಗಿದೆ. ಸ್ವತ್ತಿನ ವ್ಯಾಜ್ಯವು ಮೂಲ ದಾವೆ ಇತ್ಯರ್ಥದಲ್ಲಿನ ಅವದಿಯಲ್ಲಿ "ಏಕೈಕ ವಾದಿ" ನಿಧನರಾಗಿರುವುದೂ ಸಹ ಮತ್ತು ಅರ್ಜಿದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಅರ್ಜಿಯ ಜೊತೆಯಲ್ಲಿ ನೋಂದಾಯಿತ ಉಯಿಲಿನ ಆಧಾರದ ಮೇಲೆ ಮೃತ ವಾದಿಯ ಕಾನೂನು ಸಮ್ಮತ ಪ್ರತಿನಿಧಿಯಾಗಿರುವಂತಹ ದಾಖಲೆಯನ್ನು ತರುವುದಕ್ಕೆ ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದೂ ವಿವಾದಿತವಲ್ಲ. ಮೂಲ ವಾದಿಯ ಮತ್ತು ಅರ್ಜಿದಾರರ ಸಂಬಂಧವನ್ನು ಪ್ರತಿವಾದಿಗಳು/ಪ್ರತ್ಯರ್ಜಿದಾರರು ವಿವಾದಗೊಳಿಸಿರುವುದರಿಂದ, ವಿಚಾರಣಾ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಉಪಬಂಧಗಳ ಅಡಿಯಲ್ಲಿನ ಉದ್ದೇಶದಂತೆ ಆಜ್ಞಾಪಕಾ ಪ್ರಕ್ರಿಯೆಯನ್ನು ಪರಿಗಣಿಸದೆ ಅರ್ಜಿಯನ್ನು ವಜಾಗೊಳಿಸುವುದಕ್ಕೆ ಮುಂದಾಗಿರುತ್ತದೆ, ಈ ಮುಂದಿನಂತೆ ಓದಲಾಗಿದೆ:

> *"ಕಾನೂನು ಸಮ್ಮತ ಪ್ರತಿನಿಧಿಗೆ ಸಂಬಂಧಿಸಿದ ಪ್ರಶ್ನೆಯ ನಿರ್ಣಯ.–*
>
> *ಯಾರೇ ವ್ಯಕ್ತಿಯು, ಮೃತ ವಾದಿಯ ಅಥವಾ ಮೃತ ಪ್ರತಿವಾದಿಯ ಕಾನೂನುಸಮ್ಮತ ಪ್ರತಿನಿಧಿಯಾಗಿದ್ದಾನೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯು ಉದ್ಭವಿಸುವಲ್ಲಿ ಅಂಥ ಪ್ರಶ್ನೆಯನ್ನು ನ್ಯಾಯಾಲಯವು ತೀರ್ಮಾನಿಸತಕ್ಕದ್ದು.*
>
> *ಪರಂತು, ಅಂಥ ಪ್ರಶ್ನೆಯು ಅಪೀಲು ನ್ಯಾಯಾಲಯದ ಮುಂದೆ ಉದ್ಭವಿಸಿದ್ದಲ್ಲಿ ಆ ನ್ಯಾಯಾಲಯವು, ಆ ಪ್ರಶ್ನೆಯನ್ನು ನಿರ್ಣಯಿಸುವ ಮುಂಚೆ ಆ ಪ್ರಶ್ನೆಯ ಬಗ್ಗೆ ಅಧಿವಿಚಾರಣೆ ನಡೆಸಲು ಮತ್ತು ಅಂಥ ಅಧಿವಿಚಾರಣೆಯಲ್ಲಿ ಅಭಿಲೇಖಿತವಾದ ಸಾಕ್ಷ್ಯವು ಯಾವುದಾದರೂ ಇದ್ದರೆ, ಅದು, ತನ್ನ ನಿರ್ಣಯಗಳು ಮತ್ತು ಅದಕ್ಕೆ ಇರುವ ಕಾರಣಗಳು ಇವುಗಳೊಂದಿಗೆ ದಾಖಲೆಗಳನ್ನು ಹಿಂತಿರುಗಿಸಲು ಯಾವುದೇ ಅಧೀನ ನ್ಯಾಯಾಲಯಕ್ಕೆ*

*ನಿರ್ದೇಶಿಸಬಹುದು ಮತ್ತು ಆ ಪ್ರಶ್ನೆಯನ್ನು ನಿರ್ಣಯಿಸುವಲ್ಲಿ ಅಪೀಲು ನ್ಯಾಯಾಲಯವು ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬಹುದಾಗಿದೆ".*

10. ಸದರಿ ಉಪಬಂಧದ ಸಾದಾ ಓದು, ಪಕ್ಷಕಾರರ ನಡುವೆ ಇತ್ಯರ್ಥದಲ್ಲಿರುವ ದಾವೆಯಲ್ಲಿ ಮತ್ತೊಂದು ಕಡೆಯಿಂದ ವಿವಾದವಾಗಿರುವ ಯಾರೇ ವ್ಯಕ್ತಿಯು ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಸಲ್ಲಿಸಿದ ಅರ್ಜಿಯ ಮೇಲೆ ಮತ್ತು ಕಾಲ ಪರಿಮಿತಿ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ಸಲ್ಲಿಸಿದ ಅರ್ಜಿಯ ಮೇಲೆ ವಿಚಾರಣೆಯನ್ನು ನಡೆಸುವುದು ಅಧಿವಿಚಾರಣಾ ನ್ಯಾಯಾಲಯದ ಆಜ್ಞಾಪಕ ಭಾಗವಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

11. ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತಿವಾದಿಗಳು, ನೋಂದಾಯಿತ ಉಯಿಲಿನ ಆಧಾರದ ಮೇಲೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 3ನೇ ನಿಯಮದ 22ನೇ ಕ್ರಮಾದೇಶದ ಮೇರೆಗಿನ ದಾಖಲೆಯಲ್ಲಿ ಬರುವುದಕ್ಕೆ ಬಯಸಿರುವ ಅರ್ಜಿದಾರಳಿಗೆ ಮೂಲ ವಾದಿಯ ನಡುವೆ ಇರುವ ನಿಜವಾದ ಸಂಬಂಧವನ್ನು ವಿವಾದಗೊಳಿಸಿರುತ್ತಾರೆ. ಅಧಿವಿಚಾರಣಾ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದಲ್ಲಿ ಉಪಬಂಧಿಸಿದ ಆಜ್ಞಾಪಕವನ್ನು ಅನುಸರಿಸಿರುವುದಿಲ್ಲ.

12. ಮಾನ್ಯ ಸರ್ವೋಚ್ಚ ನ್ಯಾಯಾಲಯವು ವರದಿಯಾಗಿರುವ ***ಕಾಂತೀಯ ಸಿಂಗ್ ಸ್ಯಾಟೋಕ್ ಸಿಂಗ್ ಮತ್ತು ಇತರರು –ವಿರುದ್ಧ– ಕರ್ತರ್ ಸಿಂಗ್***[1], ಮೊಕದ್ದಮೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಉಪಬಂಧಗಳನ್ನು ಪರಿಗಣಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

1. (2009) 5 ಎಸ್‌ಸಿಸಿ 155

*"19. ಅಪೀಲುದಾರರ ಸ್ಥಾನಮಾನ ಹಾಗೂ ಅವರ ಬಾಡಿಗೆದಾರನ ಸ್ಥಾನಮಾನಕ್ಕೆ ಸಂಬಂಧಿಸಿದ ವಿಷಯದಲ್ಲಿನ ಸಂದಿಗ್ಧ ಪರಿಸ್ಥಿತಿಯನ್ನು ಪರಿಗಣಿಸಿದ್ದಾಗ್ಯೂ, ದಿವಂಗತ ಸನ್‌ತಕ್ ಸಿಂಗ್ ಮರಣದ ಕಾಲದಲ್ಲಿ ಅವರು ನಡೆಸುತ್ತಿದ್ದ ವ್ಯವಹಾರವನ್ನು ಮುಂದುವರೆಸಿಕೊಂಡು ಹೋಗುವವರನ್ನು ಗುರುತಿಸುವ ಸಂಬಂಧದಲ್ಲಿ ಅವರು ನಡೆಸುತ್ತಿದ್ದ ವ್ಯವಹಾರದ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಮತ್ತು ವಾಸ್ತವಿಕ ದೃಷ್ಟಿಯಿಂದ ಯುಕ್ತವಾದ ಅಪೀಲುದಾರರನ್ನು ನಿರ್ಧರಿಸುವ ಸಂಬಂಧದಲ್ಲಿ ಮತ್ತು ತದನಂತರದಲ್ಲಿ ಎರಡನೇ ಅಪೀಲಿನಲ್ಲಿ ಪಡೆದುಕೊಂಡ ದಾಖಲೆಯ ಮೇಲೆ ಸನ್‌ತಕ್ ಸಿಂಗ್ ಅವರ ಕಾನೂನುಸಮ್ಮತ ಪ್ರತಿನಿಧಿಯನ್ನು ಅಪೀಲು ದಾರನನ್ನಾಗಿ ಪರಿಗಣಿಸುವ ಸಂಬಂಧದಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ವಿಷಯವನ್ನು ರವಾನಿಸುವುದು ಉಚ್ಚ ನ್ಯಾಯಾಲಯಕ್ಕೆ ಅವಶ್ಯಕವಾಗಿದೆ".*

13. ಮಾನ್ಯ ಸರ್ವೋಚ್ಚ ನ್ಯಾಯಾಲಯ ವರದಿಯಾಗಿರುವ ***ಜಲಾಧಿ ಸುಗುಣ (ಮೃತನ ಕಾನೂನು ಸಮ್ಮತ ಪ್ರತಿನಿಧಿ) –ವಿರುದ್ಧ– ಸತ್ಯ ಸಾಯಿ ಕೇಂದ್ರೀಯ ಟ್ರಸ್ಟ್ ಮತ್ತು ಇತರರು***[2], ಮೊಕದ್ದಮೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 22ನೇ ಕ್ರಮಾದೇಶದ 4 ಮತ್ತು 5ನೇ ನಿಯಮದ ಉಪಬಂಧಗಳನ್ನು ಪರಿಗಣಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

*16. 22ನೇ ಕ್ರಮಾದೇಶದ 4 ಮತ್ತು 5ನೇ ನಿಯಮದ ಉಪಬಂಧಗಳು ಆಜ್ಞಾಪಕಗಳಾಗಿವೆ. ಅಪೀಲು ಮಾಡಿದ ಪ್ರತಿವಾದಿ ಮರಣವನ್ನಪ್ಪಿದಾಗ ನ್ಯಾಯಾಲಯವು ಮೃತ ಪ್ರತಿವಾದಿಯ ಸಂಪತ್ತಿಗೆ ಇರುವ ಎಲ್ಲ ಪ್ರತಿಸ್ಪರ್ಧಿ ಕ್ಲೇಮುದಾರರ ಅಪೀಲನ್ನು ಆಲಿಸಿ, ಅಪೀಲನ್ನು ವಿಲೆ ಮಾಡುವುದಕ್ಕೆ ಸಾಧಾರಣ ವಾದ ಪ್ರಕ್ರಿಯೆಯನ್ನು ಅದು ಮಾಡತಕ್ಕದ್ದಲ್ಲ. ಅಲ್ಲದೆ, ಅದು ಕಾನೂನು ಸಮ್ಮತ*

2. 8 ಎಸ್‌ಸಿಸಿ 521 (2008)

*ಪ್ರತಿನಿಧಿಗಳೆಂದು ಕ್ಲೇಮು ಮಾಡಿದ ಎಲ್ಲ ವ್ಯಕ್ತಿಗಳನ್ನು ಪಕ್ಷಕಾರನನ್ನಾಗಿ ಮಾಡುವುದಾಗಲೀ, ಪಕ್ಷಕಾರರು ಸಲ್ಲಿಸಿದ ಅಪೀಲಿನಂತೆ ಮೃತನ ಸಂಪದವನ್ನು ಪ್ರತಿನಿಧಿಸುವವರು ಯಾರು ಎಂಬುದನ್ನು ನಿರ್ಣಯಿಸುವುದಾಗಲೀ ಮತ್ತು ಅಪೀಲಿನ ಗುಣಾರ್ಹತೆಯನ್ನು ಆಲಿಸಿ ಮೊಕದ್ದಮೆಯನ್ನು ಮುಂದುವರೆಸಿರುವಾಗ ನ್ಯಾಯಾಲಯವು ಈ ಸಂದರ್ಭಗಳಲ್ಲಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದಲ್ಲ ಹಾಗೂ ನ್ಯಾಯಾಲಯ ಅಪೀಲಿನ ಗುಣಾರ್ಹತೆಯ ಜೊತೆ ಜೊತೆಯಲ್ಲಿ ನಡೆಸುವ ಸಂಬಂಧದ ನಿರ್ಣಯವನ್ನು ಸಹ ಮೃತ ಪ್ರತಿವಾದಿಯ ಕಾನೂನು ಸಮ್ಮತ ಪ್ರತಿನಿಧಿ ಯಾರು ಆಗಿರುತ್ತಾರೆ ಎಂಬ ನಿರ್ಣಯವನ್ನು ಮುಂದೂಡಲೂಬಾರದು. ಸಂಹಿತೆ ಮೃತ ಪ್ರತಿವಾದಿಯ ಕಾನೂನು ಸಮ್ಮತ ಪ್ರತಿನಿಧಿಯಾಗಿ ಯಾರೇ ವ್ಯಕ್ತಿ ಇರುವಾಗ ಅಥವಾ ಇಲ್ಲದಿರುವಾಗ ಉದ್ಭವವಾಗುವ ಪ್ರಶ್ನೆಯನ್ನು ಅದು ಸ್ಪಷ್ಟ ರೂಪದಲ್ಲಿ ಉಪಬಂಧಿಸಿದೆ. ನ್ಯಾಯಾಲಯವು ಅಂಥ ಪ್ರಶ್ನೆ ಉದ್ಭವಿಸಿದಾಗ ಸಂಹಿತೆಯಲ್ಲಿ ಸ್ಪಷ್ಟವಾಗಿ ಉಪಬಂಧಿಸಿದಂತೆಯೇ ನಿರ್ಣಯಿಸತಕ್ಕದ್ದು. ಸಂಹಿತೆಯಲ್ಲಿ ಪ್ರತಿವಾದಿಗಳಲ್ಲಿ ಒಬ್ಬರು ಮರಣವನ್ನಪ್ಪಿದಾಗ ಮತ್ತು ಅವನ ಉತ್ತರಾಧಿಕಾರಿ ಜೀವಿತವಾಗಿರುವ ಉಳಿದ ಪ್ರತಿವಾದಿಗಳ ವಿರುದ್ಧ ದಾವೆಯನ್ನು ಹೂಡತಕ್ಕದ್ದಲ್ಲ ಎಂಬುದನ್ನು ಸಹ ಉಪಬಂಧಿಸಿದೆ. ಈ ಕಾರಣದಿಂದ, ಮೃತ ಪ್ರತಿವಾದಿಯ ಕಾನೂನು ಸಮ್ಮತ ಪ್ರತಿನಿಧಿಗಳನ್ನು ಪಕ್ಷಕಾರನನ್ನಾಗಿ ಮಾಡಲು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ನಂತರದಲ್ಲಿ, ಮೊಕದ್ದಮೆಯನ್ನು ಮುಂದುವರೆಸುವುದು. 5ನೇ ನಿಯಮದಲ್ಲಿ ಅಪೀಲಿನ ಗುಣಾರ್ಹತೆಯನ್ನು ಆಲಿಸಿದ ಮೇಲೆ ಮೊದಲಿಗೆ ಕಾನೂನು ಸಮ್ಮತ ಪ್ರತಿನಿಧಿಯನ್ನು ನಿರ್ಣಯ ಮಾಡತಕ್ಕದ್ದನ್ನು ನಿರ್ದಿಷ್ಟವಾಗಿ ಉಪಬಂಧಿಸಿರದಿರುವುದರಿಂದ, ಕಾನೂನು ಸಮ್ಮತ ಪ್ರತಿನಿಧಿಯನ್ನು ಸ್ಪಷ್ಟಗೊಳಿಸಿಕೊಳ್ಳುವ ಸಲುವಾಗಿ 4ನೇ ನಿಯಮವನ್ನು ಓದಿಕೊಳ್ಳುವುದರೊಂದಿಗೆ 11ನೇ ನಿಯಮದಲ್ಲಿರುವಂತೆ ಅಪೀಲನ್ನು*

*ಆಲಿಸಿದ ತರುವಯ ಮಾತ್ರವೇ ಕಾನೂನು ಸಮ್ಮತ ಪ್ರತಿನಿಧಿಗಳನ್ನು ದಾಖಲೆಯಲ್ಲಿ ಸೇರಿಸಬೇಕಾಗುತ್ತದೆ.*

*19. ನಾವು, ತದನುಸಾರವಾಗಿ ದಿನಾಂಕ 19.9.2006ರಂದು ನೀಡಿದ ತೀರ್ಪನ್ನು ವಜಾಗೊಳಿಸಿದ್ದೇವೆ ಮತ್ತು ಈ ಅಪೀಲನ್ನು ಪುರಸ್ಕರಿಸಲಾಗಿದೆ, ಈ ಮುಂದಿನ ನಿರ್ದೇಶನಗಳೊಂದಿಗೆ ಉಚ್ಚ ನ್ಯಾಯಾಲಯಕ್ಕೆ ದಾಖಲಿಸಿದ ಅಪೀಲನ್ನು ಪೂರ್ವಸ್ಥಿತಿಗೆ ತರಲಾಗಿದೆ:*

*i. ಉಚ್ಚ ನ್ಯಾಯಾಲಯವು, ಮೊದಲು ಮೃತಳ ಗಂಡನ ಕಡೆಯಿಂದ ಇರುವ ಹಾಗೂ ಮೃತಳ ಸೋದರ ಹಾಗೂ ಸೋದರಿಯರ ಮಕ್ಕಳ ಕಡೆಯಿಂದ ಇರುವ ವಿವಾದವನ್ನು ವಿಚಾರಣಾ ನ್ಯಾಯಾಲಯವು ದಿನಾಂಕ 28.11.2005ರಂದು ದಾಖಲಿಸಿದ ಸಾಕ್ಷ್ಯಾಧಾರಗಳನ್ನು ಮತ್ತು ವಾಸ್ತವಾಂಶಗಳನ್ನು ಪರಿಗಣಿಸಿದ ತರುವಾಯ ಮತ್ತು ಪರಸ್ಪರ ವಿರೋಧಿ ಕ್ಲೇಮುದಾರರ ಕ್ಲೇಮುಗಳನ್ನು ಆಲಿಸಿ ಅವರ ನಡುವೆ ಇರುವ ವಿವಾದವನ್ನು ಮೊದಲು ನಿರ್ಣಯ ಮಾಡತಕ್ಕದ್ದು.*

*ii. ಅಂಥ ನಿರ್ಣಯದ ನಂತರ, ನಿರ್ಣೀತಗೊಂಡು ವ್ಯಕ್ತಿ(ಗಳು) ಮೃತನ ಸಂಪದವನ್ನು ಪ್ರತಿನಿಧಿಸುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ ಎಂಬುದನ್ನು ಅವರನ್ನು ಮೃತರ ಕಾನೂನು ಸಮ್ಮತ ಪ್ರತಿನಿಧಿಗಳೆಂದು ದಾಖಲೆಗಳಲ್ಲಿ ಸೇರಿಸತಕ್ಕದ್ದು.*

*iii. ತದನಂತರದಲ್ಲಿ, ಅಪೀಲನ್ನು ಗುಣಾರ್ಹತೆ ಮೇಲೆ ಆಲಿಸತಕ್ಕದ್ದು ಮತ್ತು ಅದನ್ನು ಕಾನೂನಿಗನುಗುಣವಾಗಿ ವಿಲೇ ಮಾಡತಕ್ಕದ್ದು.*

14. ಮಾನ್ಯ ಸರ್ವೋಚ್ಚ ನ್ಯಾಯಾಲಯವು, ವರದಿಯಾಗಿರುವ ***ಸುರೇಶ್ ಕುಮಾರ್ ಬನ್ಸಾಲ್ –ವಿರುದ್ಧ– ಕೃಷ್ಣ ಬನ್ಸಾಲ್ ಮತ್ತು ಇತರರು***[3], ಪ್ರಕರಣದಲ್ಲಿ ಸಿವಿಲ್

3. (2010)2 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಗಳು 162

ಪ್ರಕ್ರಿಯಾ ಸಂಹಿತೆಯ ಪ್ರಕರಣ 2(11)ರ ಮತ್ತು 5ನೇ ನಿಯಮದ 22ನೇ ಕ್ರಮಾದೇಶದ ಉಪಬಂಧಗಳನ್ನು ಪರಿಗಣಿಸುವಾಗ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"19. ಸಿವಿಲ್ ಪ್ರಕ್ರಿಯಾ ಸಂಹಿತೆಯೂ ವ್ಯವಹರಣೆಗಳ ಬಾಹುಳ್ಯವನ್ನು ತಪ್ಪಿಸುವ ಉದ್ದೇಶದ ಸಲುವಾಗಿ ಮತ್ತು ಅದೇ ವ್ಯವಹರಣೆಗಳಲ್ಲಿನ ವ್ಯಾಜ್ಯಗಳ ಸಂಬಂಧದಲ್ಲಿನ ನ್ಯಾಯ ನಿರ್ಣಯದ ಸಲುವಾಗಿ ಪಕ್ಷಕಾರರು, ಅದೇ ಪ್ರಮುಖ ವಿವಾದದಲ್ಲಿನ ವಿವಿಧ ಆಯಾಮಗಳಿಗೆ ಸಂಬಂಧಿಸಿದ ವಿವಿಧ ವ್ಯವಹರಣೆಗಳ ಸಂಬಂಧವಾಗಿ ವಿವಿಧ ನ್ಯಾಯಾಲಯಗಳಿಗೆ ಅಥವಾ ಸಂಸ್ಥೆಗಳಿಗೆ ಹೋಗದಂತೆ ತಪ್ಪಿಸುವ ಸಂಬಂಧದಲ್ಲಿಂಯೇ ವಿವಿಧ ಉಪಬಂಧಗಳನ್ನು ನಿರ್ದೇಶಿಸಿದೆ. ಅಂಥ ಕ್ರಮ ಮಾರ್ಗವು, ತೀರ್ಪುಗಳಲ್ಲಿನ ಸಂಘರ್ಷ ಪರಿಣಾಮವನ್ನು ಉಂಟು ಮಾಡುತ್ತವೆ ಮತ್ತು ವ್ಯಾಜ್ಯಗಳನ್ನು ಬಗೆಹರಿಸುವುದಕ್ಕೆ ಪ್ರತಿಯಾಗಿ ಅವುಗಳು, ಸೃಜಿತವಾದ ಗೊಂದಲ ಮತ್ತು ವಿರೋಧಾಭಾಸಗಳಲ್ಲಿ ಮುಕ್ತಾಯಗೊಳ್ಳುತ್ತದೆ.*
>
> *20. ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ XXIIನೇ ಕ್ರಮಾದೇಶದ ಮೇರೆಗೆ ಮೃತ ವಾದಿಯ ಅಥವಾ ಮೃತ ಪ್ರತಿವಾದಿಯ ಕಾನೂನು ಸಮ್ಮತ ಪ್ರತಿನಿಧಿಗಳು ಯಾರಾಗ ಬೇಕೆಂಬ ಪ್ರಶ್ನೆಯನ್ನು ಕಾನೂನು ವ್ಯವಹರಣೆಗಳನ್ನು ನಡೆಸುವ ಸಂಬಂಧದಲ್ಲಿ ಮಾತ್ರವೇ ದಾಖಲೆಯಲ್ಲಿ, ಕಾನೂನು ಸಮ್ಮತ ಪ್ರತಿನಿಧಿಗಳನ್ನು ತರುವ ಸಲುವಾಗಿನ ಉದ್ದೇಶಕ್ಕಾಗಿ ಮಾತ್ರವೇ ಆ ಪ್ರಶ್ನೆಗಳನ್ನು ಅಲ್ಲಿಯೇ ಉತ್ತಮ ವಿಧಾನದಲ್ಲಿ ಇತ್ಯರ್ಥಗೊಳಿಸುವುದು ಮತ್ತು ಹಾಗೆ ಇತ್ಯರ್ಥಗೊಂಡ ಕಾನೂನು ಪ್ರತಿನಿಧಿಗಳು ಅದನ್ನು ಪೂರ್ವನ್ಯಾಯದಂತೆ ಮತ್ತು ಪ್ರತಿಸ್ಪರ್ಧಿ ಕಾನೂನು ಸಮ್ಮತ ಪ್ರತಿನಿಧಿಗಳ ನಡುವಿನ ವ್ಯಾಜ್ಯವನ್ನು ಸ್ವತಂತ್ರವಾಗಿ ತಮ್ಮ ತಮ್ಮಲ್ಲಿಯೇ*

*ವಿಚಾರಣೆ ಮಾಡಿಕೊಳ್ಳುವುದಕ್ಕೆ ಮತ್ತು ಪ್ರಮಾಣಿತ ಉಯಿಲಿನ ಪತ್ರದ ವ್ಯವಹರಣೆಗಳ ನಿರ್ಣಯಗಳಿಗೆ ಅದನ್ನು ಪ್ರವರ್ತನೆ ಮಾಡಿಕೊಳ್ಳಬಾರದು. ಅದನ್ನು ಹಾಗೆ ಪ್ರವರ್ತಿಸಲು ಅನುಮತಿಸಿದ ಪಕ್ಷದಲ್ಲಿ ಹಿಂದಕ್ಕೆ ಪಡೆದ ದಾವೆ ಅಥವಾ ದಾವೆ ಸಂಬಂಧಿತ ಇತರ ವಿಷಯದ ನಿರ್ಣಯವನ್ನು ಮುಂದುವರೆಸಲು ಅದು ಅನುವು ಮಾಡಿಕೊಡುತ್ತದೆ. ದಾವೆಯ ನಿರ್ಣಯಗಳು ವಿಳಂಬವಾಗುತ್ತದೆ ಹಾಗೂ ಇದರಿಂದ ಬಾಡಿಗೆದಾರರು ಮಾತ್ರವೇ ಫಲಾನುಭವವನ್ನು ಪಡೆದುಕೊಳ್ಳುವಂತಾಗುತ್ತದೆ.*

*21. ನಮ್ಮ ದೃಷ್ಟಿಯಲ್ಲಿ, ವ್ಯವಸ್ಥಿತವಾಗಿ ವ್ಯಾಜ್ಯ ವ್ಯವಹರಣೆಗಳನ್ನು ಕಡಿಮೆಗೊಳಿಸಲು ಮತ್ತು ಪಕ್ಷಕಾರರ ಪ್ರತಿಸ್ಪರ್ಧಿ ಕ್ಲೇಮುಗಳನ್ನು ಪರಿಗಣಿಸುವ ಸಲುವಾಗಿ, ಮೃತವಾದಿಯ ವಾರಸುದಾರರು ಮತ್ತು ಕಾನೂನುಸಮ್ಮತ ಪ್ರತಿನಿಧಿಗಳು, ಮೃತವಾದಿಯ ಉಯಿಲಿನ ಆಧಾರದ ಮೇಲೆ ಕ್ಲೇಮು ಮಾಡಿದ ದಾಖಲೆಯಲ್ಲಿ ಒಳಗೊಂಡ ಕಾನೂನು ಸಮ್ಮತ ಪ್ರತಿನಿಧಿಗಳು, ಹಾಗೆಯೇ ಎಲ್ಲ ಕಾನೂನುಸಮ್ಮತ ಪ್ರತಿನಿಧಿಗಳು ಎಂದರೆ ಅಪೀಲುದಾರರು ಮತ್ತು ಸ್ವಾಭಾವಿಕ ವಾರಸುದಾರರು ಮತ್ತು ಮೃತವಾದಿಯ ಕಾನೂನುಸಮ್ಮತ ಪ್ರತಿನಿಧಿಗಳು ವಾಸ್ತವಿಕ ಕಾನೂನು ಸಮ್ಮತ ಪ್ರತಿನಿಧಿಗಳು ಮೃತವಾದಿಯ ಸಂಪದದ ಅಂತಿಮ ಫಲಾನುಭವವನ್ನು ಪ್ರತಿನಿಧಿಸುವ ಸಂಬಂಧದಲ್ಲಿ ಅವರೆಲ್ಲರು ಅನುಸರಿಸಬೇಕಿರುವ ಯುಕ್ತ ಮಾರ್ಗ ಕ್ರಮವನ್ನು ಅವರ ಗಮನಕ್ಕೆ ತರುವುದು. ಈ ಕಾರ್ಯವಿಧಾನವನ್ನು ಅನುಸರಿಸಿದ್ದಲ್ಲಿ, ಅದು ದಾವೆಯ ವಿಲೆಯಲ್ಲಿ ಆಗುವ ವಿಳಂಬವನ್ನು ಸಹ ತಡೆಯಬಹುದಾಗಿದೆ.*

*22. ನಮ್ಮ ದೃಷ್ಟಿಯಲ್ಲಿ, ಇದರಲ್ಲಿ ಮೇಲೆ ಮಾಡಿದ ವಿಚಾರ ವಿಮರ್ಶೆಯಿಂದ ನಾವು, ಉಚ್ಚ ನ್ಯಾಯಾಲಯದಂತೆಯೇ ವಿಚಾರಣಾ ನ್ಯಾಯಾಲಯವು ಈ ಹಂತದಲ್ಲಿನ ವ್ಯವಹರಣೆಗಳಲ್ಲಿ ಆಪಾದಿತ ಉಯಿಲಿನ ಆಧಾರದ ಮೇಲೆ ಅಪೀಲುದಾರರ ಪರವಾಗಿ ಪಕ್ಷಕಾರನ್ನಾಗಿ*

*ದಾಖಲು ಮಾಡುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸುವ ಸಮರ್ಥನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ.*

*23. ಈ ತೀರ್ಪನ್ನು ನೀಡುವ ಮುಂಚೆ, ಈ ನ್ಯಾಯಾಲಯವು ಜಲಾಧಿ ಸುಗುಣ (ಮೃತ) ಅವರ ಕಾನೂನು ಸಮ್ಮತ ಪ್ರತಿನಿಧಿಗಳು –ವಿರುದ್ಧ– ಸತ್ಯಸಾಯಿ ಕೇಂದ್ರೀಯ ಟ್ರಸ್ಟ್ ಮತ್ತು ಇತರರು [(2008) 8 ಎಸ್‌ಸಿಸಿ 521] ಅಪೀಲುದಾರರ ಪರವಾಗಿ ಮಾನ್ಯ ಹಿರಿಯ ನ್ಯಾಯವಾದಿಗಳು ಉಲ್ಲೇಖಿಸಿದ ನಿರ್ಣಯಗಳನ್ನು ಅವಶ್ಯವಾಗಿ ಪರಿಗಣಿಸುತ್ತದೆ. ಜಲಾಧಿ ಸುಗುಣ (ಮೇಲೆ ಹೇಳಿದ) ಮೊಕದ್ದಮೆಯಂತೆ, ಈ ನ್ಯಾಯಾಲಯ ಉಯಿಲಿನಲ್ಲಿ ಇರದ ವಾರಸುದಾರ(ಗಂಡ) ಮತ್ತು ಉಯಿಲಿನ ಮೂಲಕ ಸ್ವತ್ತನ್ನು ಪಡೆದುಕೊಳ್ಳುವವರನ್ನು (ಸೋದರ ಮತ್ತು ಸೋದರಿಯ ಮಕ್ಕಳು) ಮೃತ ಪ್ರತಿವಾದಿಯ ವಾರಸುದಾರನನ್ನು ಪಕ್ಷಕಾರನನ್ನಾಗಿ ಮಾಡಲು ಕೋರಿ ಸಲ್ಲಿಸಿದ ಅಪೀಲನ್ನು ನ್ಯಾಯಾಲಯದ ಮುಂದಿರುವ ದಾಖಲೆಯಲ್ಲಿ ತರಬೇಕಾಗಿರುವುದರಿಂದ ವ್ಯವಹರಣೆಗಳನ್ನು ಮತ್ತಷ್ಟು ಮುಂದುವರೆಸಿದೆ, ಮತ್ತಷ್ಟು ಮುಂದುವರೆದು, ಅದು ತನ್ನ ನಿರ್ಣಯದಲ್ಲಿ ಉಯಿಲಿನ ಮೇರೆಗೆ ಸ್ವತ್ತನ್ನು ಪಡೆಯುವವರು, ನಿಧನರಾಗಿರುವಾಗ, ಮೃತರ ಉಯಿಲಿನ ಸಂಪದವನ್ನು ಪ್ರತಿನಿಧಿಸುವುದಕ್ಕೆ ಉದ್ದೇಶಿತವಾಗಿರುವವರು, ಉಯಿಲಿನ ಸ್ವತ್ತನ್ನು ಪಡೆಯುವವರು ಮೃತರಾಗಿರುವಾಗ ಅವರ ಸಂಪದಕ್ಕೆ ಕಾನೂನುಸಮ್ಮತ ಪ್ರತಿನಿಧಿಯೂ ಸಹ ಮಧ್ಯವರ್ತಿಯಾಗಿರುವುದನ್ನು ನಿರ್ಣಯದಲ್ಲಿ ತಿಳಿಸಿದೆ.*

*24. ಮೇಲ್ಕಂಡ ವಿಚಾರ ವಿಮರ್ಶೆಯ ದೃಷ್ಟಿಯಲ್ಲಿ ಮತ್ತು ಜಲಾಧಿ ಸುಗುಣ (ಮೇಲಿನ) ವರದಿಯಾಗಿರುವ ನಿರ್ಣಯದ ದೃಷ್ಟಿಯಲ್ಲಿ, ನಾವು, ವಜಾಗೊಳ್ಳುವ ವ್ಯವಹರಣೆಯ ದೃಷ್ಟಿಯಲ್ಲೂ ಸಹ, ಉಯಿಲಿನ ಸ್ವತ್ತನ್ನು ಪಡೆಯುವವರು ಮರಣವನ್ನಪ್ಪಿರುವಾಗ ಅವರ*

*ಸಂಪದದ ಹಿತಾಸಕ್ತಿಯನ್ನು ಪ್ರತಿನಿಧಿಸುವುದಕ್ಕೆ ಉದ್ದೇಶಿತವಾಗಿರುವವರು ಉಯಿಲಿನ ಮೇರೆಗೆ ಸ್ವತ್ತನ್ನು ಪಡೆಯುವವರಾಗಿರುವಾಗ ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 2(11)ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಕಾನೂನು ಸಮ್ಮತ ಪ್ರತಿನಿಧಿಯಾಗಿರುತ್ತಾನೆ. ಆ ಯಾವುದೇ ಉಯಿಲಿನ ಆಧಾರದ ಮೇಲೆ ದಾವೆಯಲ್ಲಿ ವಜಾಗೊಂಡ ನಿರ್ಣಯಕ್ಕೆ ಅದು ಅವಶ್ಯಕವಾಗದಿರುವಾಗ, ಆ ಯಾವುವೇ ಪ್ರತ್ಯಾಯೋಜಿತ ಉಯಿಲನ್ನು ಕೋರುವ ಸಂಬಂಧದಲ್ಲಿ, ಆ ಯಾವುವೇ ಉಯಿಲು ಅಸಲಿಯೇ ಅಥವಾ ನಕಲಿಯೇ ಎಂಬುದನ್ನು ಸಂಶಯ ವ್ಯಕ್ತಪಡಿಸಿದ ಒಬ್ಬರು ಅಥವಾ ಪಕ್ಷಕಾರರು ಅದರ ನಿರ್ಣಯಕ್ಕಾಗಿ ಮೊಕದ್ದಮೆಯನ್ನು ಹಿಂದಿರುಗಿಸಲು ಪ್ರಮಾಣಿತ ನ್ಯಾಯಾಲಯಕ್ಕೆ ಅದನ್ನು ಕಳುಹಿಸಬೇಕು.*

15. ಮೇಲಿನ ಎಲ್ಲ ಕಾರಣಗಳ ದೃಷ್ಟಿಯಿಂದ ಪುನರೀಕ್ಷರಣಾ ಅರ್ಜಿಯನ್ನು ಅಂಗೀಕರಿಸಲಾಗಿದೆ. ಅಧಿವಿಚಾರಣಾ ನ್ಯಾಯಾಲಯವು ದಿನಾಂಕ 15.04.2015 ರಂದು ಮೂಲ ದಾವೆ ಸಂಖ್ಯೆ 71/2012 ರಂದು ಮಾಡಿದ ಐ.ಎ. ಸಂಖ್ಯೆ V ಮತ್ತು VI ರಲ್ಲಿ ಆಳಂದದ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ದಾಖಲೆಯ ಮೇಲೆ ಹೊರಡಿಸಿದ ಪ್ರಶ್ನಿತ ಆದೇಶವನ್ನು ತಳ್ಳಿ ಹಾಕಲಾಗಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 5ನೇ ನಿಯಮದ 22ನೇ ಕ್ರಮಾದೇಶದ ಮೇರೆಗೆ ಉದ್ದೇಶಿಸಿದಂತಹ ಕಾರ್ಯ ವಿಧಾನವನ್ನು ಅನುಸರಿಸಿದ ನಂತರ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳ ಬೆಳಕಿನಲ್ಲಿ ಸದರಿ ಅರ್ಜಿಗಳನ್ನು (ಐ.ಎ. ಸಂಖ್ಯೆ V ಮತ್ತು VI) ಹೊಸದಾಗಿ ಪರಿಗಣಿಸಿ ಪುನರ್ ವಿಚಾರಣೆ ಮಾಡುವುದಕ್ಕೆ ವಿಷಯವನ್ನು ವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಲಾಗಿದೆ ಮತ್ತು ಕಾನೂನಿಗನುಸಾರವಾಗಿ ಆದೇಶವನ್ನು ಹೊರಡಿಸುವುದು.

---